# ನಿತ್ಯ ಕಿಶೋರತೆ

ಮಹಾಕವಿ ಕುವೆಂಪು ಟಂಕಿಸಿದ ವಿಪುಲ ಪದಗಳಲ್ಲಿ 'ನಿತ್ಯ ಕಿಶೋರತೆ' ಎಂಬುದೂ ಒಂದು. 'ದೊಡ್ಡವರೆಲ್ಲರ ಹೃದಯದಿ ಕಟ್ಟಿಹ ತೊಟ್ಟಿಲ ಲೋಕದಲಿ। ನಿತ್ಯ ಕಿಶೋರತೆ ನಿದ್ರಿಸುತಿಹುದು ವಿಸ್ಮೃತ ನಾಕದಲಿ...' ಎನ್ನುತ್ತಾರೆ ಕುವೆಂಪು. 'ಕಿಶೋರತೆ' ಎಂದರೆ ಬಾಲ್ಯಾವಸ್ಥೆ. ಬದುಕಿನ ಒಂದು ಹಂತದಲ್ಲಿ ಮಾತ್ರ ಬಾಲ್ಯಾವಸ್ಥೆ ಅಥವಾ ಕಿಶೋರತೆ ಇರುವುದೆಂಬುದು ನಮ್ಮೆಲ್ಲರ ಪಾಲಿನ ಅನುಭವ ಸತ್ಯ. ಆದರೆ ಕುವೆಂಪುವಿನ ಅಭಿಪ್ರಾಯವೇ ಬೇರೆ. ಅವರ ಪ್ರಕಾರ ಕಿಶೋರತೆ ಕೆಲವು ಕಾಲ ಮಾತ್ರ ಇದ್ದು ಮರೆಯಾಗುವುದಿಲ್ಲ. ಅದು ಮನುಷ್ಯನ ಬದುಕಿನ ಎಲ್ಲ ಘಟ್ಟದಲ್ಲೂ ಇರುತ್ತದೆ; ಆದರೆ ನಿದ್ರಿಸುತ್ತಿರುತ್ತದೆ ಎನ್ನುತ್ತಾರೆ ಅವರು. ಆದ್ದರಿಂದಲೇ ಅವರು ಅದನ್ನು 'ನಿತ್ಯ ಕಿಶೋರತೆ' ಅಂದರೆ 'ಶಾಶ್ವತ ಮಗುತನ'ವೆಂದಿರುವುದು.

ನಮ್ಮ ಬದುಕನ್ನು ಸಿಂಹಾವಲೋಕನ ಕ್ರಮದಲ್ಲಿ ಧ್ಯಾನಿಸಿದಾಗ, ಬದುಕಿನಲ್ಲಿ ನಾವು ಹಾಯ್ದುಬಂದ ವಿವಿಧ ಘಟ್ಟಗಳ ನೆನಪು ಮರುಕಳಿಸುತ್ತದೆಯಷ್ಟೆ? ಇಂಥ ನೆನಪುಗಳ ಸರಣಿಯಲ್ಲಿ ಬಾಲ್ಯದ ಹಂತವೆಂಬುದು ವಿಶಿಷ್ಟ ಬಣ್ಣದಿಂದ ಕೂಡಿ ಥಳ ಥಳಿಸುತ್ತದೆ. ಬಾಲ್ಯದಲ್ಲಿ ನಾವು ಅನುಭವಿಸಿದ ಬೆರಗು, ನಮ್ಮ ಸುತ್ತಲಿನ ವಸ್ತು–ಸಂಗತಿಗಳಲ್ಲಿ ನಮ್ಮಲ್ಲಿದ್ದ ಕುತೂಹಲ, ಚಿಕ್ಕ ಪುಟ್ಟ ಘಟನೆಗಳಿಂದಲೂ ನಾವು ಪಡೆದ ನಿರ್ಮಲವಾದ ಸಂತೋಷ, ಅಂದಿನ ಜೀವನೋಲ್ಲಾಸ, ದಣಿವರಿಯದ ಉತ್ಸಾಹ, ಸ್ಪಂದನ ಶೀಲತೆ– ಇಂಥವೆಲ್ಲವೂ ವಯಸ್ಸಾಗುತ್ತಾ ಬಂದಂತೆ ನಮ್ಮಿಂದ ದೂರ ಸರಿಯುವುದಾದರೂ ಏಕೆ? ಏಕೆಂದರೆ, ಬಾಲ್ಯ ಕಾಲವೆಂಬುದು ಲೋಕ ಸಂಪರ್ಕದಿಂದ ನಮ್ಮ ವ್ಯಕ್ತಿತ್ವ ಕಲುಷಿತಗೊಳ್ಳದ ಪರಿಶುದ್ಧ ಅವಧಿ. ಬಾಲ್ಯದಲ್ಲಿ ನಾವು ಆಕಾಶದಿಂದ ಆಗಷ್ಟೇ ಹುಲ್ಲಿನೆಸಳಿನ ಮೇಲೆ ಬಿದ್ದಿರುವ ಮಂಜಿನ ಮಣಿಗಳಂತೆ ಶುಭ್ರವಾಗಿರುತ್ತೇವೆ, ಪೂರ್ವಗ್ರಹ ಪೀಡೆಯಿಲ್ಲದೆ ಜಗತ್ತನ್ನು ಗ್ರಹಿಸುವ, ಸ್ವೀಕರಿಸುವ, ಆಸ್ವಾದಿಸುವ ಮನಃಸ್ಥಿತಿ ನಮ್ಮದಾಗಿರುತ್ತದೆ. ಎಲ್ಲದರ ಬಗೆಗೂ ನಮಗೆ ಬೆರಗು, ಆಸಕ್ತಿ, ಕುತೂಹಲಗಳಿರುವುದರಿಂದ ನಾವು ಬಾಲ್ಯದಲ್ಲಿ ಚೈತನ್ಯಶೀಲರಾಗಿರುತ್ತೇವೆ. ಒಟ್ಟಿನಲ್ಲಿ ನಮ್ಮ ಭಾವಲೋಕ ಮುಕ್ತವಾಗಿದ್ದು, ಏನೆಲ್ಲವನ್ನೂ ಸ್ವೀಕರಿಸಲು ಸಿದ್ಧವಾಗಿರುತ್ತದೆ. ಆದರೆ ದಿನಕಳೆದಂತೆಲ್ಲಾ ಈ ವ್ಯಾವಹಾರಿಕ ಪ್ರಪಂಚದ ಜಟಿಲತೆ ಕುಟಿಲತೆಗಳು ನಮ್ಮ ಮುಗ್ಧತೆಯ ಮೇಲೆ ಧಾಳಿ ಮಾಡುತ್ತವೆ. ಬದುಕಿನ ದಾರಿಯಲ್ಲಿ ನಮ್ಮನ್ನು ವಿಹ್ವಲಗೊಳಿಸುವ ಅಥವಾ ದಾರಿ ತಪ್ಪಿಸುವ ಅದೆಷ್ಟೋ ಅನುಭವಗಳು ನಮಗೆ ಎದುರಾಗುತ್ತವೆ. ಅತಿಪರಿಚಿತತೆಯನ್ನುಂಟು ಮಾಡುತ್ತವೆ. ಕ್ರಮೇಣ ನಮ್ಮಲ್ಲಿದ್ದ 'ಕಿಶೋರತೆ' ಹೃದಯದ ಯಾವುದೋ ಮೂಲೆಯನ್ನು ನಿದ್ರಿಸತೊಡಗುತ್ತದೆ. ಆಗ ನಮ್ಮ ಒಳಗಣ್ಣುಗಳು ಮುಚ್ಚಿಕೊಂಡು, ಹೊರಗಣ್ಣುಗಳು ಮಾತ್ರ ತೆರೆದಿರುತ್ತವೆ. ಪ್ರಾಪಂಚಿಕ ಅನುಭವಗಳಿಂದಾಗಿ, ನಮ್ಮ ವ್ಯಕ್ತಿತ್ವದಲ್ಲಿ ಪ್ರಾಯೋಜನಿಕ ದೃಷ್ಟಿ ಮೇಲ್ಮೈ ಪಡೆಯುತ್ತದೆ. ಪರಿಣಾಮವಾಗಿ ಬಾಲ್ಯದ ಸೂಕ್ಷ್ಮ ಸುಕುಮಾರ ಗುಣಗಳೆಲ್ಲಾ ಹಿಮ್ಮೆಟ್ಟುವಂತಾಗುತ್ತದೆ.

ಆಂಗ್ಲ ಕವಿ ವರ್ಡ್ಸ್‌ವರ್ತ್‌ನ 'The rainbow' ಎಂಬ ಕವಿತೆಯಲ್ಲಿ 'The child is father of the man' ಎಂಬ ಪ್ರಸಿದ್ಧ ಹೇಳಿಕೆಯಿದೆ. 'ಮಗುವೆ ಮನುಜನ ತಂದೆ' ಎಂದು ಬಿ.ಎಂ.ಶ್ರೀ. ಇದನ್ನು ಅನುವಾದಿಸಿದ್ದಾರೆ. ಇಲ್ಲಿ 'ಮನುಜ' ಎಂದರೆ 'ವಯಸ್ಕ ವ್ಯಕ್ತಿ' ಎಂಬ ಅರ್ಥದಲ್ಲಿ ಬಳಸಲಾಗಿದೆ. ವಯಸ್ಕ ಮಗುವಿನ ತಂದೆ ಎಂಬುದು ಅನುಭವ ಸತ್ಯ. ಆದರೆ ವರ್ಡ್ಸ್‌ವರ್ತ್ ಈ ಸತ್ಯವನ್ನು ಪಲ್ಲಟಗೊಳಿಸಿ, ಒಂದು ಭಾವ ಸತ್ಯವನ್ನು ಪ್ರತಿಪಾದಿಸಿದ್ದಾನೆ. ಈ ಮೊದಲೇ ಪ್ರಸ್ತಾಪಿಸಿದಂತೆ ಲೌಕಿಕ ಅನುಭವಗಳು ನಮ್ಮ ಮುಗ್ಧ ಭಾವಲೋಕವನ್ನು ಜಡಗೊಳಿಸಿ, ನಮ್ಮಲ್ಲಿನ ಮಗುತನ ನಿದ್ರಿಸುವಂತೆ ಮಾಡುತ್ತವೆ. ವಯಸ್ಕನೊಬ್ಬ ತಾನು ಕಳೆದು ಕೊಂಡ ಸ್ಪಂದನಶೀಲತೆಯನ್ನು ಮರಳಿ ಪಡೆಯಬೇಕಾದರೆ, ಮತ್ತೊಮ್ಮೆ ಮಗುವಾಗಬೇಕು; ಶಿಶುತನವನ್ನು ಪುನರನುಭವಿಸಬೇಕು. ಆಗ ಆತ ಹೊಸ ಹುಟ್ಟು ಪಡೆಯುತ್ತಾನೆ. ಆಗ ಮಗುವೆಂಬುದು ಮನುಜನ ತಂದೆಯಾಗುತ್ತದೆ. ಬದುಕನ್ನು ನವೀಕರಿಸುವ ಈ ಪ್ರಕ್ರಿಯೆಯನ್ನೇ ಕೀಟ್ಸ್‌ಕವಿ 'dying into life' ಎಂದು ಬಣ್ಣಿಸಿರುವುದು. ಆದ್ದರಿಂದಲೇ ಕುವೆಂಪು– 'ಮಕ್ಕಳ ಸಂಗದೊಳೆಚ್ಚರಗೊಳ್ಳಲಿ ಆನಂದದ ಆ ದಿವ್ಯ ಶಿಶು। ಹಾಡಲಿ ಕುಣಿಯಲಿ ಹಾರಲಿ ಏರಲಿ ದಿವಿಜತ್ವಕೆ ಈ ಮನುಜ ಪಶು' ಎಂದು ಹಾರೈಸಿರುವುದು.

■ ವೈನತೇಯ

## ಮಾತೇ ಮುತ್ತು

★ ಪ್ರೇಮ ಬಹಳಷ್ಟನ್ನು ಮಾಡಬಹುದು; ಹಣ ಎಲ್ಲವನ್ನೂ ಮಾಡಬಲ್ಲದು!

–ಬ್ರಿಟಿಷ್ ಗಾದೆ

★ ಹಣ ಮಾತನಾಡಿದಾಗ ಪ್ರಪಂಚ ಮೌನವಾಗಿ ಕೇಳುತ್ತದೆ!

–ಸ್ವೀಡಿಷ್ ಗಾದೆ

★ ಮನುಷ್ಯ ಸಮಾಜದ ಋಣವನ್ನು ಹೊತ್ತುಕೊಂಡು ಬಂದಿದ್ದಾನೆ. ಅದರ ಋಣದಿಂದಲೇ ಬೆಳೆಯುತ್ತಾನೆ. ನಾಳೆ ದಿನ ಸಾಯುವಾಗ ತಾನು ಪಡೆದಿರುವುದಕ್ಕಿಂತ ಹೆಚ್ಚಿನ ಋಣ ಸಲ್ಲಿಸಿ ಹೋದರೆ ಆತ ಹುಟ್ಟಿದ್ದಕ್ಕೊಂದು ಸಾರ್ಥಕ.

–ಶಿವರಾಮ ಕಾರಂತ

★ ಹುಟ್ಟು– ಸಾವುಗಳ ನಡುವಿನ ಸಮಯವನ್ನು ಸಂತೋಷದಿಂದ ಕಳೆಯುವುದೇ, ಹುಟ್ಟು– ಸಾವುಗಳಿಗಿರುವ ಪರಿಹಾರ.

–ಜಾರ್ಜ್ ಸಂತಯನ

★ ಮೈಗೆ ಹಾಕಿದ ಬರೆ ಮಾಯವಾಗಬಹುದು; ಹೊಸ ತೊಗಲು ಬಂದರೆ ಕಾಣದ ಹಾಗೂ ಆದೀತು. ಆದರೆ ಹೆಸರಿಗೆ ಬರೆ ಬಿದ್ರೆ, ಹೊಸ ಜನ್ಮ ಬಂದರೂ ಹೋಗುವುದಿಲ್ಲ.

–ಪನ್ನಾಲಾಲ್ ಪಟೇಲ್

★ ಸರಿಯಾದ ರೀತಿಯಲ್ಲಿ ಕಳೆದ ದಿನ ಒಳ್ಳೆಯ ನಿದ್ರೆಯನ್ನು ತರುವಂತೆ ಒಳ್ಳೆಯ ರೀತಿಯಲ್ಲಿ ಕಳೆದ ಜೀವನ ಸುಖಕರ ಸಾವನ್ನು ತರುತ್ತದೆ.

–ಲಿಯೋನಾರ್ಡ್ ವಿನ್ಸಿ

★ ಹೆಂಡತಿ ಗೆಳತಿಗಿಂತ ಹೆಚ್ಚಾಗಿರ್ತಾಳ. ತಾಯಿ ಆಗಿರತಾಳ ಆಕಿ! ಸ್ವಲ್ಪದರಾಗ ಹೇಳೂದಂದರ ಹೆಂಡತಿ ಅಂದ್ರ ಒಂದು ಬಂದರು ಇದ್ದಾಂಗ– ಹಡಗ ನಿಲ್ಲಲಿಕ್ಕ.

–ದಿ.ವಾ.ಶಿರವಾಡಕರ

★ ಹೊಗಳಿಕೆಯಲ್ಲಿ ಎರಡು ವಿಧ– ಒಂದು ಸಹಜ ಗುಣಗಳನ್ನು ಮೆಚ್ಚಿ ಆಡುವ ಪ್ರಶಂಸೆ. ಅದು ಒಂದು ಬಗೆಯ ಹೃದಯವಂತಿಕೆಯ ಪ್ರತಿಕ್ರಿಯೆ. ಅದು ಏನನ್ನೂ ಬಯಸುವುದಿಲ್ಲ. ಇನ್ನೊಂದು, ಇಲ್ಲದ ಗುಣಗಳನ್ನು ಹೊಗಳಿ ಹಾಡುವ ಅಥವಾ ಇರುವ ಅಲ್ಪಗುಣವನ್ನು ದೊಡ್ಡದು ಮಾಡಿ ಹೇಳುವ ಮುಖಸ್ತುತಿ... ಸ್ವಾರ್ಥ ಮೂಲವಾದದ್ದು.

–ಹಾ.ಮಾ.ನಾಯಕ

★ ಮಡದಿಯನ್ನು ಹೆಂಡತಿಯೆಂದು ನಾ ಕರೆಯಲೊಲ್ಲೆ; 'ಮನೆ'ಯೆಂದು ಕರೆಯುವೆನು. ಅವಳಿಂದ 'ಮನೆ'. ಅವಳೆ 'ನನ್ನ ಮನೆ'.

–ಯಹೂದಿ ಪಂಡಿತ

★ ಅಲ್ಪದರಲ್ಲಿಯೇ ಹೆಣ್ಣು ತನ್ನ ಮನೆ ಕಟ್ಟಬಯಸುತ್ತಾಳೆ; ಗಂಡಸಾದರೋ ತನಗಾಗಿ ಒಂದು ಲೋಕವನ್ನೆ ಕಟ್ಟಿಕೊಳ್ಳಬಯಸುತ್ತಾನೆ.

–ಥಾಮಸ್ ಹಾರ್ಡಿ

★ ಮೊದಲಿಗೆ ತಾಯಾದಿ ನನ್ನ ಹೇಣ್ತಿ, ಸದನಕ ಸೊಸೆಯಾದಿ, ಮುದದಿಂದ ಮೋಹಿಸಿ ಮದಿವ್ಯಾದವನಿಗೆ ಬಗೆ ಬಗೆ ತಣಿಸಿದಿ ನನ ಹೇಣ್ತಿ.

–ಶಿಶುನಾಳ ಶರೀಫ

★ ಮಕ್ಕಳು ಕತ್ತಲಲ್ಲಿ ಹೋಗಲು ಹೆದರುವಂತೆ, ಮನುಷ್ಯರು ಸಾವನ್ನು ಕುರಿತು ಹೆದರುತ್ತಾರೆ.

–ಫ್ರಾನ್ಸಿಸ್ ಬೇಕನ್

★ ಸಾಕಷ್ಟು ಸ್ಥಿತಿವಂತನಾದ ಅವಿವಾಹಿತ ಗಂಡಸಿನ ಅವಶ್ಯಕತೆ 'ಹೆಂಡತಿ' ಎಂಬುದು ಎಲ್ಲ ಕಾಲದ ಸತ್ಯ.

–ಜೇನ್ ಆಸ್ಟಿನ್

★ ಬೇರೆಯವರನ್ನು ಗೌರವಿಸಬೇಕಾದಾಗ ನಿಮ್ಮನ್ನು ನೀವೇ ಹೀಗಳೆದುಕೊಳ್ಳದಿರಿ. ಅದೇ ನಾವು ಕಲಿಯಬೇಕಾದ ಮೊದಲ ಪಾಠ, ನಮ್ಮ ಆತ್ಮಗೌರವವನ್ನು ನಾವು ಕಾಪಾಡಿಕೊಳ್ಳಬೇಕು.

–ಸ್ವಾಮಿ ರಂಗನಾಥನಂದ

★ ಹೊಗಳಿಕೆಯೇ ತೆಗಳಿಕೆಯ ಆರಂಭ.

–ಜಪಾನಿ ಗಾದೆ